ಓ.ಎಸ್ ನಂ. 86/2018 ಡಿ.ಡಬ್ಲ್ಯೂ-5

**ಸಾಕ್ಷಿಯನ್ನು ದಿನಾಂಕಃ 18.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್ ಕೆ ವಕೀಲರಿಂದಃ**

ಪ್ರತಿವಾದಿ 1 ರಾಜಮ್ಮ ರವರ ಗಂಡನಾದ ಎನ್ ನಾಗರಾಜು ರವರು ಹಿಂದೆ ಹೆಚ್ ಡಿ ಕೋಟೆ ಶಾಸಕರಾಗಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ಸದರಿ ನಾಗರಾಜು ರವರ ಮಗ 3 ನೇ ಪ್ರತಿವಾದಿ ರವರು ಸದರಿ ನಾಗರಾಜು ರವರ ಹಿರಿಯ ಮಗನ ಸೊಸೆಯಾಗಿರುತ್ತಾರೆ. 7 ನೇ ಪ್ರತಿವಾದಿ ರೇಣುಕಾ ಗೋಪಾಲಕೃಷ್ಣ ರವರು ನನಗೆ ಗೊತ್ತಿರುತ್ತದೆ. ಪ್ರತಿವಾದಿ 1 ರಿಂದ 3 ರವರು ನನಗೆ 30 ವರ್ಷದಿಂದಲೂ ಪರಿಚಯವಿರುತ್ತಾರೆ. 1 ನೇ ಪ್ರತಿವಾದಿಯವರ ಗಂಡ ನಾಗರಾಜು ರವರ ಪರಿಚಯವು ಸಹ ಇರುತ್ತದೆ. ಸದರಿ ರವರು ಬದುಕಿದ್ದಾಗ ನಾನು ಮತ್ತು ಅವರು ವಿಶ್ವಾಸದಲ್ಲಿ ಇದ್ದೆವು.

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಡಿ 2 ದಾನಪತ್ರದ ಬಗ್ಗೆ ತಿಳಿದಿರುತ್ತದೆ. ಸದರಿ ದಾನಪತ್ರದಲ್ಲಿ ಏನೆಲ್ಲಾ ಉಲ್ಲೇಖಿಸಿ ಮತ್ತು ಯಾವೆಲ್ಲಾ ದಾಖಲಾತಿಗಳ ಬಗ್ಗೆ ನಿಮಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗರಾಜು ರವರು ಮತ್ತು ಸೋಂರಂದೇವಿ ರವರ ಸಂಬಂಧಿಕರೇ ಎಂದರೆ ಸಾಕ್ಷಿಯು ಸಂಬಂಧಿಕರಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ 2 ರಂತೆ ದಾನಪತ್ರವನ್ನು ಏಕೆ ಎನ್ ನಾಗರಾಜು ರವರಿಗೆ ಬರೆದುಕೊಡಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಎನ್ ನಾಗರಾಜು ರವರು ಸದರಿ ಸೋಂರಂ ದೇವಿಯವರ ಯಜಮಾನರಾದ ಖಾನ್ ಸಿಂಗ್ ರವರಿಗೆ ವ್ಯವಹಾರಿಕವಾಗಿ ತುಂಬಾ ಸಹಾಯ ಮಾಡಿರುವುದರಿಂದ ದಾನ ಪತ್ರವನ್ನು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ದಾನಪತ್ರದಲ್ಲಿ ಉಲ್ಲೇಖ ಇರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ಯವಾ ದಿನಾಂಕ ಮತ್ತು ತಿಂಗಳು ಎಂದು ನನಗೆ ಈಗ ನನಪು ಇರುವುದಿಲ್ಲ. 2003 ರಲ್ಲಿ ಬರೆಯಲಾಗಿರುತ್ತದೆ. ಸಾಕ್ಷಿಯು ದಿನಾಂಕ 25.12.2003 ರಂದು ಬರೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ಅಚ್ಯೂತ್ ರಾಜೇ ಅರಸ್ ರವರ ಕಛೇರಿಯಲ್ಲಿ ಬರೆಯಲಾಗಿರುತ್ತದೆ.

ಸದರಿ ದಾನಪತ್ರವನ್ನು ಬೆಳಿಗ್ಗೆ 11 ಗಂಟೆಗೆ ಬರೆಯಲಾಗಿರುತ್ತದೆ. ಆ ದಿನ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ನಿಡಿ 2 ರಲ್ಲಿ ದಾನಪತ್ರದಲ್ಲಿ ಆಧಾರ ಪತ್ರದ ಬಗ್ಗೆ ಉಲ್ಲೇಖ ಇರುವುದಿಲ್ಲ. ನಿಡಿ 2 ರಂತೆ ದಾನಪತ್ರ ಮಾಡುವ ಸಮಯದಲ್ಲಿ ನಾನು, ಖಾನ್ ಸಿಂಗ್ ಮತ್ತು ನಿಂಗರಾಜು ರವರು ಇದ್ದೆವು. ನನ್ನ ಮುಖ್ಯ ವಿಚಾರಣಾ ಪತ್ರವನ್ನು ನನ್ನ ವಕೀಲರು ತಯಾರಿಸಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ದಾನಪತ್ರ ನೊಂದಣಿ ಆದ ದಿನದಂದು ಹಕ್ಕು ಮತ್ತು ಸ್ವಾಧೀನ ಸದರಿ ಎನ್ ನಾಗರಾಜು ರವರಿಗೆ ವರ್ಗಾವಣೆಯಾಗಿರುತ್ತದೆ. ಸೋರಂದೇವಿ ರವರು ದಿನಾಂಕ 30.12.2003 ರಂದು ಪ್ರತಿವಾದಿ 5 ಸಿ ಎನ್ ನಾಗಣ್ಣ ರವರಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಂತೆ ಪ್ರತಿವಾದಿ 5 ಸಿ ಎನ್ ನಾಗಣ್ಣ ರವರು ದಿನಾಂಕ 03.09.2004 ರಂದು ವಾದಿಯರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿ ಪುಟ್ಟ ಸ್ವಾಮಿ ರವರು ಪ್ರತಿವಾದಿ 5 ರವರಿಂದ ದಾವಾ ಸ್ವತ್ತನ್ನು ಖರೀದಿಸಿದ ನಂತರ ವಾದಿ ಮತ್ತು ಎನ್ ನಾಗರಾಜು ರವರ ಮಧ್ಯೆ ಖಾತೆ ವಿಚಾರವಾಗಿ ತಕರಾರು ಇತ್ತು ಎಂದರೆ ಸಾಕ್ಷಿಯು ಪುಟ್ಟಸ್ವಾಮಿ ಯಾರು ಎಂದೇ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 2 ರಂತೆ ದಾನಪತ್ರ ನೊಂದಣಿ ಯಾಗುವ ಸಮಯದಲ್ಲಿ ಸೊರಂ ದೇವಿಯವರ ಹೆಸರಿನಲ್ಲಿ ದಾವಾ ಸ್ವತ್ತು ಇರುವ ಬಗ್ಗೆ ಯಾವುದೇ ದಾಖಾಲಾತಿಯನ್ನು ನಾನು ನೋಡಿರುವುದಿಲ್ಲ. ದಾನ ಪತ್ರವನ್ನು ನಾನು,ಸೊರಂ ದೇವಿ ಈ ಹಿಂದೆ ಸಾಕ್ಷಿ ನುಡಿದ ನಿಂಗರಾಜು, ನಾಗರಾಜು ಮತ್ತು ಅಚ್ಯುತ್ ರಾಜೇ ಅರಸ್ ರವರ ಎಲ್ಲಾ ಶಾರಿಕ್ಕಾಗಿ ಸೃಷ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 2 ಒಂದು ನಾಮಕಾವಸ್ಥೆ ದಾಖಲಾತಿಯಾಗಿದ್ದು ನಾವೆಲ್ಲರೂ ಸೇರಿ ವಾದಿಯವರಿಗೆ ಮೊಸ ಮಾಡಲು ಎಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನಾಗರಾಜು ರವರೆಲ್ಲಾ ವಿಶ್ವಾಸದಲ್ಲಿ ಇರುವುದರಿಂದ ಅವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 25.12.2003 ರಲ್ಲಿ ಆದ ದಾನಪತ್ರಕ್ಕೆ ನಾನು ಸಾಕ್ಷಿ ಸಹಿಯನ್ನು ಮಾಡಿರುವುದಿಲ್ಲ. ಆ ದಿನದಂದು ಆದ

ದಾಖಲಾತಿಯನ್ನು ಸೃಷ್ಟಿಸಿ ಕಟ್ಟುಕತೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎನ್ ನಾಗರಾಜು ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು

ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ